ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/03/ಇಸಿಎಸ್(3)/2015

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು-1,
ದಿನಾಂಕ:18-05-2017

ಸುತ್ತೋಲೆ

ವಿಷಯ: ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಸಂಯೋಜನೆ ಪಡೆಯಲು ಶುಲ್ಕ ಪಾವತಿಸಿರುವ ಬಗ್ಗೆ ಮಾಹಿತಿ ನೀಡುವ ಕುರಿತು.

ಉಲ್ಲೇಖ: ನಿರ್ದೇಶಕರು ತಾಂ.ಶಿ.ಇ. ಬೆಂಗಳೂರು ಇವರ

1. ಜ್ಞಾಪನ ಸಂಖ್ಯೆ: ಬಿಟಿಇ 02 ಇಸಿಎಸ್(2) 2013 ದಿ:28-07-2014
2 ಜ್ಞಾಪನ ಸಂಖ್ಯೆ: ಬಿಟಿಇ 03 ಇಸಿಎಸ್(2) 2013 ದಿ:23-02-2016
3. ಜ್ಞಾಪನ ಸಂಖ್ಯೆ: ಬಿಟಿಇ 03 ಇಸಿಎಸ್(3) 2015 ದಿ:10-02-2017

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳು ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಸಂಯೋಜನೆ ಪಡೆಯುವ ಪ್ರಕ್ರಿಯೆಗೆ ಅನುವಾಗುವಂತೆ ಉಲ್ಲೇಖ (1) (2) ಮತ್ತು (3) ರ ಜ್ಞಾಪನಗಳಲ್ಲಿ ಕ್ರಮವಾಗಿ 2014-15, 2015-16 ಮತ್ತು 2016-17 ನೇ ಸಾಲುಗಳಿಗೆ ಸಂಯೋಜನೆ ಪಡೆಯಲು ನಿಗದಿತ ಸಂಯೋಜನೆ ಶುಲ್ಕವನ್ನು ಲೆಕ್ಕ ಶೀರ್ಷಿಕೆ 0202-02-101-0-06 'ಅಫಿಲಿಯೇಷನ್ ಫೀ ಫಾರ್ ಟೆಕ್ನಿಕಲ್ ಎಜುಕೇಷನ್' ಯಡಿ ಜಮಾ ಮಾಡುವಂತೆ ತಿಳಿಸಲಾಗಿತ್ತು.

ಪ್ರಸಕ್ತ ವರ್ಷದಲ್ಲಿ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಸಂಯೋಜನೆಗಾಗಿ ಆನ್‌ಲೈನ್ ಮೂಲಕ ಅರ್ಜಿ ತಂತ್ರಾಂಶ ಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿರುತ್ತದೆ. ಪ್ರಸ್ತುತ ಅಕೌಂಟೆಂಟ್ ಜನರಲ್‌ರವರ ಕಛೇರಿ ಅಧಿಕಾರಿಗಳಿಂದ ಮಂಡಳಿಯಲ್ಲಿ ಲೆಕ್ಕ ತಪಾಸಣೆ ನಡೆಯುತ್ತಿದ್ದು, 2014-15, 2015-16 ಮತ್ತು 2016-17 ನೇ ಸಾಲುಗಳಲ್ಲಿ ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್‌ಗಳು ಸಂಯೋಜನಾ ಶುಲ್ಕ ಪಾವತಿಸಿರುವ ಬಗ್ಗೆ ಮಾಹಿತಿ ನೀಡುವಂತೆ ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಎಲ್ಲಾ ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳು ದಿನಾಂಕ 22-05-2017 ರೊಳಗೆ 2014-15, 2015-16 ಮತ್ತು 2016-17 ನೇ ಸಾಲುಗಳಿಗೆ ಸಂಯೋಜನಾ ಶುಲ್ಕ ಪಾವತಿಸಿರುವ ಮೂಲ ರಸೀದಿಗಳನ್ನು ಮತ್ತು ಎ.ಐ.ಸಿ.ಟಿ ಅನುಮೋದನೆ ಹಾಗೂ ರಾಜ್ಯ ಸರ್ಕಾರದ ಅನುಮೋದನೆ ಪಡೆದಿರುವ ಪತ್ರಗಳ ಸಹಿತ ಸಂಸ್ಥೆಯ ಒಬ್ಬ ಉಪನ್ಯಾಸಕರ ಮೂಲಕ ಖುದ್ದಾಗಿ ಮಂಡಳಿಗೆ ತಲುಪಿಸಲು ತಿಳಿಸಲಾಗಿದೆ. ಮುಂದುವರೆದು ಅನುದಾನಿತ ಸಂಸ್ಥೆಗಳ ಪ್ರಿನ್ಸಿಪಾಲರುಗಳು ತಮ್ಮ ಸಂಸ್ಥೆಯಲ್ಲಿನ ಅನುದಾನಿತ ಮತ್ತು ಅನುದಾನರಹಿತ ಕೋರ್ಸ್‌ಗಳ ವಿವರಗಳನ್ನು ಸಹ ಮಂಡಳಿಗೆ ಮೇಲ್ಕಂಡ ದಿನಾಂಕದೊಳಗೆ ಸಲ್ಲಿಸುವಂತೆ ತಿಳಿಸಲಾಗಿದೆ.

ಈ ವಿಷಯವನ್ನು ಅತಿ ಜರೂರು ಎಂದು ಪರಿಗಣಿಸಿ ಕ್ರಮಕೈಗೊಳ್ಳಲು ತಿಳಿಸಲಾಗಿದೆ. ತಪ್ಪಿದ್ದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಸ್ಥೆಯ ಪ್ರಿನ್ಸಿಪಾಲರು ಹೊಣೆಗಾರರಾಗಿರುತ್ತಾರೆಂದು ತಿಳಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,

ರಾಜ್ಯದ ಎಲ್ಲಾ ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್ ಪ್ರಿನ್ಸಿಪಾಲರುಗಳಿಗೆ – ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ

ಪ್ರತಿ:

1. ಗಣಕ ಕೇಂದ್ರ – ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು
2. ಇ ಆಡಳಿತ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು